

# ವಿಮರ್ಶಕನ ಅಂತರಂಗಕ್ಕೆ ಸರ್ಚ್‌ಲೈಟ್!

■ ಗೌರಿ

**ತನಗೆ ಈಗಾಗಲೇ ಗೊತ್ತಿರುವ ಸಂಗತಿಯನ್ನು ಒಂದು ಟ್ವಿಸ್ಟ್‌ನೊಟ್ಟಿಗೆ ಹೇಳುವ ಕೆಲಸವನ್ನು ಈ ಕಿರುಚಿತ್ರ ಅಚ್ಚುಕಟ್ಟಾಗಿ ಮಾಡುತ್ತದೆ.**

ಆಷಾಢಭೂತಿತನವೆಂಬುದು ಸಮಾಜದ ಎಲ್ಲ ಸ್ತರಗಳಲ್ಲಿಯೂ ಇದ್ದೇ ಇರುತ್ತದೆ. ವಿದ್ಯೆ, ಜ್ಞಾನಗಳೂ ವಿನಯವನ್ನು ತರದೆ ಅಹಂಕಾರವನ್ನು, ವಂಚನೆಯ ಹೊಸ ಮಾದರಿಗಳನ್ನು ಹುಟ್ಟಿಸುವುದನ್ನು ನಾವು ಪ್ರತಿದಿನವೂ ನೋಡುತ್ತಲೇ ಇರುತ್ತೇವೆ. ಹಾಗಾಗಿಯೇ ಸತ್ಯ, ನ್ಯಾಯ, ನೀತಿಯ ಪಾಠ ಹೇಳಬೇಕಾದ ವಕೀಲರೇ ಸುಳ್ಳಿನ ಕಂತೆಗಳನ್ನು ಪೋಣಿಸುತ್ತಿರುತ್ತಾರೆ. ಜನರಿಗೆ ರಕ್ಷಣೆ ಒದಗಿಸಬೇಕಾದ ಪೊಲೀಸರೇ ಭಕ್ಷಕರಾಗಿ ಮುಗ್ಧರ ಜೀವ ಹಿಂಡುತ್ತಿರುತ್ತಾರೆ. ವೈದ್ಯ ವಂಚಕನಾಗಿರುತ್ತಾನೆ, ಮೇಷ್ಟ್ರು ಸಮಾಜದ್ರೋಹಿಗಳನ್ನು ಹುಟ್ಟುಹಾಕುತ್ತಾನೆ, ನಾಯಕ ಗೋಸುಂಬೆಯಂತಾಡುತ್ತಿರುತ್ತಾನೆ. ಇವೆಲ್ಲವೂ ನಮ್ಮ ಸಮಾಜದ, ಬದುಕಿನ ಭಾಗವೇ. ಹಾಗೆ ನೋಡಿದರೆ ಅವರೆಲ್ಲರೂ ನಮ್ಮೊಳಗಿನ ಭ್ರಷ್ಟತೆಯ ಸಾಧ್ಯತೆಯ ಮೂರ್ತರೂಪಗಳೂ ಹೌದು!

ನಿರ್ದೇಶಕ ಮಂಸೋರೆ ನಿರ್ದೇಶನದ, ಬಿ. ಎಂ. ಬಶೀರ್ ಅವರ ಕಥೆಯನ್ನು ಆಧರಿಸಿದ ಕಿರುಚಿತ್ರ ‘ದಿ ಕ್ರಿಟಿಕ್’ ಇಂಥದ್ದೊಂದು ಸೋಗಲಾಡಿತನವನ್ನು ಕಾಣಿಸುವ ಪ್ರಯತ್ನವಾಗಿದೆ.

ಯಾವುದೇ ಸೃಜನಶೀಲ ಕೃತಿರಚನೆಯಲ್ಲಿ ಎರಡು ರೀತಿಯ ದಾರಿಗಳನ್ನು ನೋಡಬಹುದು. ಮೊದಲನೆಯದು, ತನಗೆ ಈಗಾಗಲೇ ಗೊತ್ತಿರುವುದನ್ನು ಜಗತ್ತಿಗೆ ಆಕರ್ಷಕವಾಗಿ ಹೇಳುತ್ತೇನೆ ಎಂಬ ಸ್ಪಷ್ಟ ಉದ್ದೇಶದಿಂದ ಕೃತಿ ರಚನೆ ಮಾಡುವುದು. ಇದು ನೀತಿಕಥೆಗಳ ಮಾದರಿ. ಅಲ್ಲಿ ನೀತಿ ಆಗಲೇ ಗೊತ್ತಿರುತ್ತದೆ. ಅದನ್ನು ಹೇಳುವುದಕ್ಕೋಸ್ಕರ ಕೃತಿ ಕಟ್ಟುತ್ತಿರುತ್ತಾರೆ. ಹಾಗಾಗಿ ಅಲ್ಲಿ ಗೊಂದಲಕ್ಕೆ ಅವಕಾಶವಿಲ್ಲ. ಆ ಕ್ಷಣದ ಎಕ್ಸೈಟ್ಮೆಂಟಿಗೆ ಕೊರತೆಯೂ ಇಲ್ಲ. ಅದರಾಚೆಗೆ ಮತ್ತೆ ಮತ್ತೆ ಅನುಸಂಧಾನಕ್ಕೆ ಸಿಗುವಂಥದ್ದು ಅಲ್ಲಿ ಇರುವುದಿಲ್ಲವಷ್ಟೆ. ಎಷ್ಟು ಸಲ ಹೇಳಿದರೂ ಅದು ಬಿಟ್ಟುಕೊಡುವ ಅರ್ಥ ಅದೇ, ಅಷ್ಟೆ. ಇನ್ನೊಂದು ಬಗೆಯದ್ದು, ಅರಿತುಕೊಳ್ಳುವ ದಾರಿ. ಅಂದರೆ ಇಲ್ಲಿ ಸೃಜನಶೀಲ ಸೃಷ್ಟಿಯ ಪ್ರಕ್ರಿಯೆಯೇ ಅರಿಯುವ ಪ್ರಕ್ರಿಯೆಯೂ ಆಗಿರುತ್ತದೆ. ತಾನೂ ಅರಿಯುತ್ತಲೇ ಆ ಅರಿವಿನ ಪಲುಕುಗಳನ್ನು ಸಹೃದಯರಿಗೆ ದಾಟಿಸುವ ವಿಸ್ಮಯವದು. ಇಂಥ ಕೃತಿಗಳು ಮತ್ತೆ ಮತ್ತೆ ಸಹೃದಯರನ್ನು ಅನುಸಂಧಾನಕ್ಕೆ ಕರೆಯುತ್ತವೆ, ಪ್ರತಿ ಸಲದ ಅನುಸಂಧಾನದಲ್ಲಿಯೂ ಹೊಸ ಅರ್ಥಗಳನ್ನು ಬಿಟ್ಟುಕೊಡುತ್ತ ಹೋಗುತ್ತದೆ.



**ಹೆಸರು:** ದಿ ಕ್ರಿಟಿಕ್
**ನಿರ್ದೇಶನ:** ಮಂಸೋರೆ
**ನಿರ್ಮಾಣ:** ಶಿಲ್ಪಾ ಹೆಗಡೆ
**ಛಾಯಾಗ್ರಹಣ:** ಗುರುಪ್ರಸಾದ್ ನರ್ನಾಡ್
**ತಾರಾಗಣ:** ಟಿ.ಎಸ್. ನಾಗಾಭರಣ, ಉಮಾ ವೈ.ಜಿ.

‘ದ ಕ್ರಿಟಿಕ್’ ಕಿರುಚಿತ್ರ ಮೊದಲನೇ ಬಗೆಯದ್ದು. ಕಥೆಯ ಸ್ವರೂಪದಲ್ಲಿಯೇ ದೃಷ್ಟಾಂತದ ಗುಣವಿದ್ದುದರಿಂದ ಅದರ ದೃಶ್ಯರೂಪವೂ ಅದರಾಚೆಗೆ ಜಿಗಿಯಲು ಸಾಧ್ಯವಾಗಿಲ್ಲ. ಆದರೆ ತನಗೆ ಗೊತ್ತಿರುವುದನ್ನು ಹೇಳುವ ಕೆಲಸವನ್ನು ಅದು ಅಚ್ಚುಕಟ್ಟಾಗಿ ಮಾಡಿದೆ. ಹಾಗಾಗಿ ಈ ಕಿರುಚಿತ್ರ ತನ್ನ ಉದ್ದೇಶದಲ್ಲಿ ಯಶಸ್ವಿಯಾಗಿದೆ ಎಂದೇ ಹೇಳಬಹುದು.

ಇಲ್ಲಿನ ಪಾತ್ರಗಳಿಗೆ ಒಂದು ಒಳಬದುಕಿಲ್ಲ. ಅವುಗಳೆಲ್ಲವೂ ನಿರ್ದೇಶಕನ/ಬರಹಗಾರನ ಘೋಷವಾಕ್ಯವನ್ನು ಸ್ಫೋಟಿಸುವ ನಿಟ್ಟಿನಲ್ಲಿ ಟೂಲ್‌ಗಳಾಗಿ ಕೆಲಸ ಮಾಡುತ್ತಿರುತ್ತವಷ್ಟೆ. ಇಲ್ಲಿನ ಕ್ಲೀಶೆ, ಪಾತ್ರಗಳ ಕಣ್ಣಲ್ಲಿ ಬರುವ ನೀರು, ಕೋಪ ಎಲ್ಲವುಗಳ ಉದ್ದೇಶವೂ ಅಂತಿಮವಾಗಿ ಅಷ್ಟೆ, ನಿರ್ದೇಶಕನ ಘೋಷವಾಕ್ಯವನ್ನು ಸ್ಫೋಟಿಸುವುದು. ಹಾಗಾಗಿಯೇ ಈ ಕಿರುಚಿತ್ರದ ಆರಂಭದ ದೃಶ್ಯದಲ್ಲಿ ವಿಮರ್ಶಕ ಟೆಲಿಫೋನಿನಲ್ಲಿ ಆಡುವ ಮಾತಿನ ಟೋನ್, ಸಾರ್ವಜನಿಕ ಭಾಷಣದ್ದು. ಅವನಿಗೆ ತಾನು ಹೇಳುತ್ತಿರುವುದು ಫೋನಿನಲ್ಲಿ ಆಚೆ ಇರುವ ವ್ಯಕ್ತಿಗಲ್ಲ, ಪರದೆಯ ಮೇಲೆ ನೋಡುತ್ತಿರುವ ಪ್ರೇಕ್ಷಕನಿಗೆ ಎಂದು ಗೊತ್ತಾಗಿಬಿಟ್ಟಿದೆ.

ಈ ಇಡೀ ಕಿರುಚಿತ್ರ ನಡೆಯುವ ಪರಿಸರದ ಪರಿಕರಗಳ ಉದ್ದೇಶವೂ ಅಷ್ಟೆ. ಮನೆಯೋ, ಲೈಬ್ರರಿಯೋ, ಪುಸ್ತಕದಂಗಡಿಯೋ ಗೊತ್ತಾಗದಷ್ಟು ಪುಸ್ತಕಗಳು, ಟೀ ಕೊಡಲೂ ಮತ್ತೊಬ್ಬ ವ್ಯಕ್ತಿ ಕಾಣಿಸಿಕೊಳ್ಳದೆ ಹೋಗುವುದು, ಮನೆಯ ಯಾವ ಕುರುಹೂ ಅಲ್ಲಿ ಇಲ್ಲದೆ ಇರುವುದು – ಎಲ್ಲವುಗಳ ಮೂಲಕ ಕಥನ ನಡೆಯುವ ವಾತಾವರಣವನ್ನು ಕಟ್ಟಿಕೊಡುವುದೂ ನಿರ್ದೇಶಕನಿಗೆ ಮುಖ್ಯ ಅನಿಸದಿರುವುದಕ್ಕೂ ಕಥೆಯ ಸ್ವರೂಪಕ್ಕೂ ಸಂಬಂಧ ಇದೆ.

ತಾಂತ್ರಿಕವಾಗಿ ಗಟ್ಟಿಯಾಗಿರುವ ಈ ಕಿರುಚಿತ್ರದ ಉದ್ದೇಶ ಗೌರವಾನ್ವಿತನೆನಿಸಿಕೊಂಡಿರುವ ವಿಮರ್ಶಕನೊಬ್ಬನ ಪೊಳ್ಳುತನವನ್ನು ಹೇಳುವುದು. ಆ ಕೆಲಸವನ್ನು ಇದು ಅಚ್ಚುಕಟ್ಟಾಗಿ ಮಾಡಿದೆ. ಆದರೆ ಹೀಗೆ ಹೇಳುವುದರ ಆಚೆಗಿನ ‘ಕಾಣ್ಕೆ’ ಇಲ್ಲಿಲ್ಲ. ಯಾಕೆಂದರೆ ಕಥೆಗಾರರಿಗಾಗಲಿ, ನಿರ್ದೇಶಕರಿಗಾಗಲಿ ಇಲ್ಲಿ ಅದು ಮುಖ್ಯ ಅನಿಸಿಲ್ಲ.

ಕಿರುಚಿತ್ರ ವೀಕ್ಷಣೆಗೆ https://bit.ly/3nJSmvm ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.